D-72-(154)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ. ಇವರು ನಿಯಮ-72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ**

ವಿಷಯ: -

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳು ಹಾಗೂ ಆ ವಿಶ್ವವಿದ್ಯಾಲಯ ಎದುರಿಸುತ್ತಿರುವ ಸಮಸ್ಯೆ, ಖಾಲಿ ಹುದ್ದೆಗಳ ಭರ್ತಿ, ಅಗತ್ಯ ಭೂಮಿ ಮಂಜೂರಾತಿಯ ಬಗ್ಗೆ ಹಾಗೂ ವಿಶ್ವವಿದ್ಯಾಲಯದ ಸಮಗ್ರ ಅಭಿವೃದ್ಧಿಗೆ ಅಗತ್ಯವಾಗಿ ಬೇಕಾದಂತಹ ಕ್ರಮಗಳನ್ನು ಕೈಗೊಳ್ಳಲು ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ , ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಮಾನ್ಯ ಉಪ ಮುಖ್ಯಮಂತ್ರಿಗಳ (ಉನ್ನತ ಶಿಕ್ಷಣ) ಹೇಳಿಕೆ**

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಸೆಪ್ಟೆಂಬರ್ 2010ರಂದು ಭೂತರಾಮನಹಟ್ಟಿ ಗ್ರಾಮದಲ್ಲಿ ಸ್ಥಾಪನೆಯಾಗಿರುತ್ತದೆ. ಪ್ರಸ್ತುತ ವಿಶ್ವವಿದ್ಯಾಲಯವು ಇರುವ ಸ್ಥಳವು ಕೇಂದ್ರ ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಕೇಂದ್ರ ಅರಣ್ಯ ಇಲಾಖೆಯ ಪರವಾನಗಿ ಇಲ್ಲದೆ ಯಾವುದೇ ಕಟ್ಟಡಗಳನ್ನು ನಿರ್ಮಿಸಲು ಅರಣ್ಯ ಇಲಾಖೆಯ ಆಕ್ಷೇಪಣೆ ಇರುತ್ತದೆ. ಆದಕಾರಣ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಸದರಿ ಮೀಸಲು ಅರಣ್ಯ ಪ್ರದೇಶವಾದ ಸರ್ವೆ ನಂ.1/1 ರಲ್ಲಿನ 178.14 ಗುಂಟೆಗಳ ವಿಸ್ತೀರ್ಣ ಪ್ರದೇಶದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ನಿರ್ಮಿಸಿರುವ ಶೈಕ್ಷಣಿಕ ಕಟ್ಟಡ, ಆಡಳಿತ ಕಟ್ಟಡ, ಎರಡು ವಿದ್ಯಾರ್ಥಿನಿಲಯ ಮತ್ತು ಸಿಬ್ಬಂದಿ ಗೃಹಗಳ ಹೊರತಾಗಿ ಇತ್ತೀಚೆಗೆ ಹೊಸದಾಗಿ ಯಾವುದೇ ಕಟ್ಟಡಗಳನ್ನು ನಿರ್ಮಿಸಿರುವುದಿಲ್ಲ.

ಪ್ರಸ್ತುತ ಮೀಸಲು ಅರಣ್ಯ ಪ್ರದೇಶದಲ್ಲಿರುವ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಿಕೊಡುವಂತೆ ಕೋರಿ ಮಾನ್ಯ ಮುಖ್ಯಮಂತ್ರಿಗಳ ಮೂಲಕ ಕೇಂದ್ರ ಸರ್ಕಾರದ ಮಾನ್ಯ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವರಿಗೆ ಪತ್ರ ಬರೆಯಲು ಈಗಾಗಲೇ ಕ್ರಮವಹಿಸಲಾಗಿದೆ. ಸದರಿ ಪ್ರಯತ್ನದ ಜೊತೆಗೆ ಹಿರೇಬಾಗೇವಾಡಿ ಹಾಗೂ ಹಾಲಗಿಮರಡಿ ಗ್ರಾಮಗಳಲ್ಲಿ ಲಭ್ಯವಿರುವ 127 ಎಕರೆ ಸರ್ಕಾರಿ ಜಮೀನು ಹಾಗೂ 80 ಎಕರೆ 30 ಗುಂಟೆ ಖಾಸಗಿ ರೈತರ ಜಮೀನು ಮಂಜೂರು ಮಾಡುವ ಸಂಬಂಧದ ಪ್ರಸ್ತಾವನೆಯು ಕಂದಾಯ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.

2020-21ನೇ ಆರ್ಥಿಕ ಸಾಲಿನಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಲೆಕ್ಕ ಶೀರ್ಷಿಕೆ 2202-03-102-0-34-102ರಡಿಯಲ್ಲಿ ಸಹಾಯಾನುದಾನ-ಆಸ್ತಿಗಳ ಸೃಜನೆಗೆ ರೂ.50.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ 120 ಬೋಧಕ ಹುದ್ದೆಗಳು ಹಾಗೂ 272 ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಭರ್ತಿಮಾಡಲಾಗಿರುತ್ತದೆ. ಅಲ್ಲದೆ ಖಾಲಿಯಿರುವ ಹುದ್ದೆಗಳ ಭರ್ತಿ ಮಾಡುವ ಸಂಬಂಧ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅಭಿಪ್ರಾಯದನುಸಾರ ಪರಿಶೀಲಿಸಿ ಪ್ರಸ್ತುತ ಎದುರಾಗಿರುವ ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ ಹುದ್ದೆಗಳ ಭರ್ತಿ ಮಾಡುವ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಹಾಗೂ ಪ್ರಸ್ತುತ ಇರುವ ವ್ಯವಸ್ಥೆಯನ್ನೇ ಮುಂದೆವರೆಸಿ ಕರ್ತವ್ಯ ನಿರ್ವಹಿಸುವಂತೆ ದಿನಾಂಕ 03.06.2020ರ ಪತ್ರದಲ್ಲಿ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಲಾಗಿದೆ.

..2

ವಿಶ್ವವಿದ್ಯಾಲಯಕ್ಕೆ ಮಂಜೂರಾದ, ಖಾಲಿಯಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ವಿವರಗಳನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಇಡಿ 103 ಯುಆರ್‌ಸಿ 2020

(ಡಾ. ಅಶ್ವತ್ಥ್ ನಾರಾಯಣ್ ಸಿ.ಎನ್)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ
ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ)

ಅನುಬಂಧ-1

ಬೋಧಕ ಹುದ್ದೆಗಳ ಮಾಹಿತಿ:

| ಕ್ರ.ಸಂ | ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಬೋಧಕ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 01 | ಪ್ರಾಧ್ಯಾಪಕರು | 20 | 05 | 15 |
| 02 | ಸಹ ಪ್ರಧ್ಯಾಪಕರು | 35 | 24 | 11 |
| 03 | ಸಹಾಯಕ ಪ್ರಧ್ಯಾಪಕರು | 65 | 59 | 06 |
| | ಒಟ್ಟು | 120 | 88 | 32 |

ಬೋಧಕೇತರ ಹುದ್ದೆಗಳ ಮಾಹಿತಿ:

| ಕ್ರ.ಸಂ | ಪದನಾಮ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಬೋಧಕ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 01 | ಉಪ ಕುಲಸಚಿವರು | 06 | - | 06 |
| 02 | ಸಹಾಯಕ ಕುಲಸಚಿವರು | 13 | - | 13 |
| 03 | ನಿವಾಸಿ ಅಭಿಯಂತರರು | 01 | - | 01 |
| 04 | ಸಹಾಯಕ ಕಾರ್ಯಪಾಲಕ ಅಭಿಯಂತರರು | 01 | - | 01 |
| 05 | ವೈದ್ಯಾಧಿಕಾರಿಗಳು | 02 | - | 02 |
| 06 | ಮುಖ್ಯ ಗ್ರಂಥಪಾಲಕರು | 01 | - | 01 |
| 07 | ಉಪಮುಖ್ಯ ಗ್ರಂಥಪಾಲಕರು | 01 | - | 01 |
| 08 | ಸಹಾಯಕ ದೈಹಿಕ ನಿರ್ದೇಶಕರು | 01 | - | 01 |
| 09 | ಕುಲಪತಿಗಳ ಕಾರ್ಯದರ್ಶಿಗಳು | 01 | - | 01 |
| 10 | ಸಿಸ್ಟಂ ಅನಾಲಿಸ್ಟ್ | 01 | - | 01 |
| 11 | ಸಿಸ್ಟಂ ಅಸಿಸ್ಟೆಂಟ್ | 05 | - | 05 |
| 12 | ಕಛೇರಿ ಅಧೀಕ್ಷಕರು | 13 | 02 | 11 |
| 13 | ಎಸ್ಟೇಟ್ ಆಫಿಸರ್ | 01 | - | 01 |
| 14 | ಸಾರ್ವಜನಿಕ ಸಂಪರ್ಕಾಧಿಕಾರಿಗಳು | 01 | - | 01 |
| 15 | ತೋಟಗಾರಿಕೆ ಅಧೀಕ್ಷಕರು | 01 | 01 | - |
| 16 | ಸಹಾಯಕ ತೋಟಗಾರಿಕೆ ಅಧೀಕ್ಷಕರು | 01 | - | 01 |
| 17 | ಫೀಲ್ಡ್ ಕೊಚ್ಚೀಸ್ಟ್‌ಗಳು | 05 | - | 05 |

..2

| | | | | |
|---|---|---|---|---|
| 18 | ಪ್ರಥಮ ದರ್ಜೆ ಸಹಾಯಕರು | 63 | 51 | 12 |
| 19 | ದ್ವಿತೀಯ ದರ್ಜೆ ಸಹಾಯಕರು | 53 | 36 | 10 |
| 20 | ಗಣಕಯಂತ್ರ ನಿರ್ವಾಹಕರು | 44 | 37 | 07 |
| 21 | ಸ್ಟೆನೋಗ್ರಾಫರ್ | 03 | 01 | 02 |
| 22 | ಕಾಂಪೌಂಡರ್ | 03 | - | 03 |
| 23 | ನರ್ಸ್‌ಗಳು | 02 | - | 02 |
| 24 | ವಾಹನ ಚಾಲಕರು | - | 07 | - |
| 25 | ಡಿ ದರ್ಜೆ ನೌಕರರು. | 49 | - | 49 |
| | ಒಟ್ಟು | 272 | 135 | 137 |